**ಕರ್ನಾಟಕ ಸರ್ಕಾರ**

**(ವಾಣಿಜ್ಯ ತೆರಿಗೆಗಳ ಇಲಾಖೆ)**

ಸಂ.ಕೆಜಿಎಸ್‌ಟಿ-ಸಿಆರ್-15/2025-26

ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿ,
ವಾಣಿಜ್ಯ ತೆರಿಗೆ ಕಾರ್ಯಾಲಯ, ಗಾಂಧಿನಗರ
ಬೆಂಗಳೂರು, ದಿನಾಂಕ: 25-04-2025

**ವಾಣಿಜ್ಯ ತೆರಿಗೆಗಳ ಆಯುಕ್ತರ ಸೂಚನೆ ಸಂಖ್ಯೆ: 01/2025- GST**

**ವಿಷಯ: ಜಿಎಸ್‌ಟಿ ನೋಂದಣಿ ಅರ್ಜಿಗಳ ಪರಿಶೀಲನೆ ಪ್ರಕ್ರಿಯೆಗೆ ಸಂಬಂಧಿಸಿದ ಸೂಚನೆಗಳು**

ಜಿಎಸ್‌ಟಿ ನೋಂದಣಿ ಪಡೆಯುವ ಪ್ರಕ್ರಿಯೆಯಲ್ಲಿ ಅರ್ಜಿದಾರರು ಎದುರಿಸುತ್ತಿರುವ ತೊಂದರೆಗಳ ಕುರಿತಾಗಿ ಇಲಾಖೆ / ಸಿಬಿಐಸಿ (ಮಂಡಳಿ)ಗೆ ಅಹವಾಲುಗಳು ಬಂದಿರುತ್ತವೆ. **ನಮೂನೆ GST REG-01** ನಲ್ಲಿ ಸಲ್ಲಿಸಿರುವ ಮಾಹಿತಿಗೆ ಸಂಬಂಧಿಸಿದಂತೆ ಅಧಿಕಾರಿಗಳು ಕೇಳುವ ಸ್ಪಷ್ಟೀಕರಣ ಹಾಗೂ **ನಮೂನೆ GST REG-01**ಗೆ ಅನುಬಂಧಿಸಲಾದ ನಿಗದಿತ ದಸ್ತಾವೇಜುಗಳ ಪಟ್ಟಿಯಲ್ಲಿ ನಿಯಮಿಸಲಾದವುಗಳನ್ನು ಹೊರತುಪಡಿಸಿ ಹೆಚ್ಚುವರಿ ದಸ್ತಾವೇಜುಗಳನ್ನು ಕೇಳುತ್ತಿರುವುದು ಪ್ರಮುಖವಾದ ತೊಂದರೆಗಳಾಗಿರುತ್ತವೆ. ಯಾವುದೇ ಮೂಲ ಪೂರೈಕೆಯಿಲ್ಲದೆ ಹೂಡುವಳಿ ತೆರಿಗೆ ಜಮೆಯನ್ನು (ITC) ಹಂಚಿಕೊಳ್ಳುವ ಉದ್ದೇಶಕ್ಕಾಗಿಯೇ ಸೃಷ್ಟಿಸಲಾದ ನಕಲಿ ಕಂಪನಿಗಳ ನೋಂದಣಿಯನ್ನು ತಡೆಗಟ್ಟುವುದರ ಜೊತೆಗೆ ಪ್ರಾಮಾಣಿಕ ಅರ್ಜಿದಾರರಿಗೆ ಅನಗತ್ಯ ಕಿರುಕುಳವಾಗದಂತೆ ನೋಡಿಕೊಳ್ಳುವ ಅಗತ್ಯತೆ ಇರುತ್ತದೆ.

2. **ನಮೂನೆ GST REG-01** ನಲ್ಲಿ ಒದಗಿಸಿರುವ ದಸ್ತಾವೇಜುಗಳು ಮತ್ತು ವಿವರಗಳ ಪರಿಶೀಲನೆಯಲ್ಲಿ ಅಧಿಕಾರಿಗಳು ವಿಭಿನ್ನ ವಿಧಾನಗಳನ್ನು ಅನುಸರಿಸುತ್ತಿರುವುದು ಗಮನಕ್ಕೆ ಬಂದಿರುತ್ತದೆ. ಅರ್ಜಿಯನ್ನು ಪರಿಶೀಲಿಸುವ ವೇಳೆ, ಅನಾವಶ್ಯಕ ಸ್ಪಷ್ಟನೆಗಳನ್ನು ಕೇಳುವುದು ನೋಂದಣಿಯಲ್ಲಿ ವಿಳಂಬವಾಗಲು ಮತ್ತು ಕೆಲವೊಮ್ಮೆ ಅರ್ಜಿಯ ತಿರಸ್ಕಾರಕ್ಕೂ ಸಹ ಕಾರಣವಾಗುತ್ತಿರುವುದನ್ನು ಗಮನಿಸಲಾಗಿದೆ.

3. **ನಮೂನೆ GST REG-03** ನಲ್ಲಿ ಕೇಳಲಾಗುವ ಮಾಹಿತಿಗಳು/ಸ್ಪಷ್ಟನೆಗಳು/ದಸ್ತಾವೇಜುಗಳ ವಿಶ್ಲೇಷಣೆಯ ಪ್ರಕಾರ, ಅವು ಮುಖ್ಯವಾಗಿ ಪ್ರಧಾನ ವ್ಯವಹಾರ ಸ್ಥಳದ ಪುರಾವೆ, ವ್ಯವಹಾರದ ಸಂಸ್ಥಾಪನೆ, ಅಧಿಕೃತ ಸಹಿದಾರ, ಮಾಲೀಕ ಮುಂತಾದ ವಿವರಗಳ ಗುರುತಿಗೆ ಸಂಬಂಧಪಟ್ಟಿರುತ್ತವೆ.

4. ನೋಂದಣಿ ಅರ್ಜಿಯ ಪರಿಶೀಲನಾ ಪ್ರಕ್ರಿಯೆಗೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ಈ ಹಿಂದೆ ಸಿಬಿಐಸಿ ಸೂಚನೆ ಸಂಖ್ಯೆ 03/2023-GST ದಿನಾಂಕ 14ನೇ ಜೂನ್ 2023 ರಂದು ನೀಡಲಾಗಿರುತ್ತದೆ. ಆದಾಗ್ಯೂ, ಬ್ಯಾಕ್ ಆಫೀಸ್‌ನಲ್ಲಿ ಹಲವು ಬದಲಾವಣೆಗಳು ಮಾಡಲಾಗಿರುವುದರಿಂದ ಹಾಗೂ ನೋಂದಣಿ ಸಂಬಂಧಿತ ದೂರುಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಇತ್ತೀಚಿನ ಬೆಳವಣಿಗೆಗಳನ್ನು ಗಮನದಲ್ಲಿಟ್ಟು ಕೊಂಡು ಹಾಗೂ ಅಧಿಕಾರಿಗಳಿಗೆ ಸ್ಪಷ್ಟತೆ ಒದಗಿಸಲು ಒಂದು ಸಮಗ್ರ ಸೂಚನೆಯನ್ನು ನೀಡಲಾಗುತ್ತಿದೆ. ಇದರನ್ವಯ, ಮೇಲೆ ಹೇಳಲಾದ ಸೂಚನೆಯನ್ನು ಸಿಬಿಐಸಿ ಸೂಚನೆ 03/2025-GST ದಿನಾಂಕ 17ನೇ ಏಪ್ರಿಲ್ 2025 ರಲ್ಲಿ ರದ್ದುಗೊಳಿಸಿರುವುದರಿಂದ, ಈ ಕೆಳಕಂಡ ಸೂಚನೆಗಳನ್ನು ನೀಡಲಾಗಿದೆ.

5. **ನಮೂನೆ GST REG-01** ನಲ್ಲಿ ನೋಂದಣಿ ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಸ್ತಾವೇಜುಗಳ ಸೂಚಕ ಪಟ್ಟಿಯನ್ನು ನಿಯಮಿಸಲಾಗಿದೆ. ನೋಂದಣಿ ಅರ್ಜಿಗಳನ್ನು ಪರಿಶೀಲಿಸುವ ಅಧಿಕಾರಿಗಳು ಮೇಲೆ ಉಲ್ಲೇಖಿಸಲಾದ ದಸ್ತಾವೇಜುಗಳ ಪಟ್ಟಿಯನ್ನು ಗಮನದಲ್ಲಿಟ್ಟುಕೊಂಡು, ನೋಂದಣಿ ಅರ್ಜಿಯ ಪರಿಶೀಲನಾ ಪ್ರಕ್ರಿಯೆಗೆ ಸಂಬಂಧಿಸಿದಂತೆ ಈ ಕೆಳಗಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು:

6. **ಅರ್ಜಿಗಳ ಪರಿಶೀಲನಾ ಪ್ರಕ್ರಿಯೆ ವೇಳೆ ಅರ್ಜಿದಾರರಿಂದ ಕೇಳಬೇಕಾದ ದಸ್ತಾವೇಜುಗಳು:**

**A. ಪ್ರಧಾನ ವ್ಯವಹಾರದ ಸ್ಥಳಕ್ಕೆ (PPOB) ಸಂಬಂಧಿಸಿದ ದಸ್ತಾವೇಜುಗಳು:** ನಮೂನೆ GST REG-01 ನಲ್ಲಿ ಪ್ರಧಾನ ವ್ಯವಹಾರ ಸ್ಥಳದ ಪುರಾವೆಗಾಗಿ ಸೂಚಕ ದಸ್ತಾವೇಜುಗಳ ಪಟ್ಟಿಯನ್ನು ನೀಡಲಾಗಿದೆ.

(i) **ಸ್ವಂತ ಸ್ಥಳದ** ಪ್ರಕರಣದಲ್ಲಿ, ಅರ್ಜಿದಾರನು ಮೇಲ್ಕಂಡ ಪಟ್ಟಿಯಲ್ಲಿ ಸೂಚಿಸಿರುವ ದಸ್ತಾವೇಜುಗಳನ್ನು ಅಪ್‌ಲೋಡ್ ಮಾಡಬೇಕು. ಈ ಪಟ್ಟಿಯು, ಇತ್ತೀಚಿನ ಆಸ್ತಿ ತೆರಿಗೆ ರಸೀದಿ ಅಥವಾ ನಗರ ಪಾಲಿಕೆಯ ಖಾತಾ ಪ್ರತಿ ಅಥವಾ ಮಾಲೀಕರ ವಿದ್ಯುತ್ ಬಿಲ್ ನ ಪ್ರತಿಯನ್ನು ಒಳಗೊಂಡಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ, ಮೇಲ್ಕಂಡ ಪಟ್ಟಿಯಲ್ಲಿರುವ ಯಾವುದಾದರೂ ಒಂದು ದಸ್ತಾವೇಜು ಅಥವಾ ಅದೇ ರೀತಿಯ ದಸ್ತಾವೇಜು ಅಂದರೆ, ಆಸ್ತಿಯ ಮಾಲೀಕತ್ವವನ್ನು ಸ್ಪಷ್ಟವಾಗಿ ಸ್ಥಾಪಿಸುವಂತಹ ನೀರಿನ ಬಿಲ್ ಅಥವಾ ರಾಜ್ಯದ ಅಥವಾ ಸ್ಥಳೀಯ ಕಾನೂನುಗಳ ಅಡಿಯಲ್ಲಿ ನಿಗದಿತವಾದ ಇತರೆ **ಯಾವುದೇ ದಸ್ತಾವೇಜುಗಳಲ್ಲಿ ಯಾವುದಾದರು ಒಂದನ್ನು** ಸಲ್ಲಿಸಿದರೆ ಸಾಕು. ಅರ್ಜಿದಾರನು ಪೋರ್ಟಲ್‌ನಲ್ಲಿ ಮೇಲೆ ಹೇಳಲಾದ ಯಾವುದಾದರು ಒಂದು ದಸ್ತಾವೇಜನ್ನು ಅಪ್‌ಲೋಡ್ ಮಾಡಿದರೆ ಸಾಕಾಗುತ್ತದೆ; ಅರ್ಜಿದಾರರಿಂದ ಮತ್ತೇನೂ ಹೆಚ್ಚುವರಿ ದಸ್ತಾವೇಜುಗಳನ್ನು ಕೇಳಬಾರದು. ನೋಂದಣಿ ಅರ್ಜಿಯ ಪರಿಶೀಲಿನಾ ಪ್ರಕ್ರಿಯೆಯಲ್ಲಿ, ಈ ದಸ್ತಾವೇಜುಗಳ ಭೌತಿಕ ಪ್ರತಿಯನ್ನು ಕೇಳಿ ಆಕ್ಷೇಪಣೆ ಎತ್ತಬಾರದು.

(iiಎ) **ಬಾಡಿಗೆ ಸ್ಥಳಗಳ** ಪ್ರಕರಣದಲ್ಲಿ, ಅರ್ಜಿದಾರನು ಸಿಂಧುವಾದ ಬಾಡಿಗೆ/ಭೋಗ್ಯ ಕರಾರಿನ ಪ್ರತಿಯ ಜೊತೆಗೆ, **ನಮೂನೆ GST REG-01** ರಲ್ಲಿನ ಸೂಚಕ ಪಟ್ಟಿಯಲ್ಲಿರುವ **ದಸ್ತಾವೇಜುಗಳಲ್ಲಿ** ಕರಾರುದಾತನ ಆಸ್ತಿಯ ಮಾಲೀಕತ್ವವನ್ನು ಸ್ಥಾಪಿಸುವಂತಹ **ಯಾವುದಾದರು ಒಂದನ್ನು** ಅಪ್‌ಲೋಡ್ ಮಾಡಬೇಕು. ಈ ಪಟ್ಟಿಯು ಇತ್ತೀಚಿನ ಆಸ್ತಿ ತೆರಿಗೆ ರಸೀದಿ ಅಥವಾ ನಗರ ಪಾಲಿಕೆಯ ಖಾತಾ ಪ್ರತಿ ಅಥವಾ ವಿದ್ಯುತ್ ಬಿಲ್ಲಿನ ಪ್ರತಿ ಇವುಗಳನ್ನು ಒಳಗೊಂಡಿರುತ್ತದೆ. ಆದಾಗ್ಯೂ, ಕ್ಷೇತ್ರೀಯ ಅಧಿಕಾರಿಗಳು, ಮಾಲೀಕರ ಪಾನ್ ಕಾರ್ಡ್, ಆದಾರ್ ಕಾರ್ಡ್, ಆಸ್ತಿಯ ಮುಂಬಾಗ ಅಥವಾ ಒಳಗೆ ತೆಗೆದಿರುವ ಮಾಲೀಕರ ಛಾಯಾಚಿತ್ರ ಇತ್ಯಾದಿ ಹೆಚ್ಚುವರಿ ದಸ್ತಾವೇಜುಗಳನ್ನು ಕೇಳುತ್ತಿರುವುದು ಕಂಡುಬಂದಿದೆ. ಸದರಿ ಪಟ್ಟಿಯಲ್ಲಿರುವ **ಯಾವುದಾದರೂ ಒಂದು ದಸ್ತಾವೇಜು** ಅಥವಾ ಅದೇ ರೀತಿಯ ದಸ್ತಾವೇಜು ಅಂದರೆ, ಕರಾರುದಾತನ ಆಸ್ತಿಯ ಮಾಲೀಕತ್ವವನ್ನು ಸ್ಪಷ್ಟವಾಗಿ ಸ್ಥಾಪಿಸುವಂತಹ ನೀರಿನ ಬಿಲ್ ಅಥವಾ ರಾಜ್ಯದ ಅಥವಾ ಸ್ಥಳೀಯ ಕಾನೂನುಗಳ ಅಡಿಯಲ್ಲಿ ನಿಗದಿತವಾದ ಇತರೆ ಯಾವುದೇ ದಸ್ತಾವೇಜುಗಳಲ್ಲಿ ಯಾವುದಾದರು ಒಂದು ಪ್ರಧಾನ ವ್ಯವಹಾರ ಸ್ಥಳದ ಪುರಾವೆಗಾಗಿ ಸಾಕಾಗುತ್ತದೆ ಎಂದು ಈ ಮೂಲಕ ಸಲಹೆ ನೀಡಲಾಗಿದೆ.

(iiಬಿ) ನೋಂದಾಯಿಸದ ಬಾಡಿಗೆ/ಭೋಗ್ಯ ಕರಾರುಗಳ ಪ್ರಕರಣದಲ್ಲಿ, ಕರಾರಿನ ಪ್ರತಿಯ ಜೊತೆಗೆ ಮೇಲ್ಕಂಡ ಪಟ್ಟಿಯಲ್ಲಿರುವ ಯಾವುದೇ ಒಂದು ದಸ್ತಾವೇಜು ಮತ್ತು ಕರಾರುದಾತನ ಗುರುತಿನ ಪುರಾವೆಯ ಪ್ರತಿಯನ್ನು ಸಲ್ಲಿಸಿದರೆ ಸಾಕಾಗುತ್ತದೆ. ನೋಂದಾಯಿತವಾಗಿರುವ ಬಾಡಿಗೆ/ಭೋಗ್ಯ ಕರಾರುಗಳ ಪ್ರಕರಣದಲ್ಲಿ, ಕರಾರು ಪ್ರತಿಯ ಜೊತೆಗೆ ಮೇಲ್ಕಂಡ ಪಟ್ಟಿಯಲ್ಲಿರುವ ಯಾವುದೇ ಒಂದು ದಸ್ತಾವೇಜನ್ನಷ್ಟೇ ಸಲ್ಲಿಸಿದರೆ ಸಾಕು; ಮಾಲೀಕರ ಗುರುತಿನ ಪುರಾವೆಯನ್ನು ಕೇಳತಕ್ಕದ್ದಲ್ಲ. ಆದಾಗ್ಯೂ, ವಿದ್ಯುತ್ ಅಥವಾ ನೀರಿನ ಸಂಪರ್ಕ ಬಾಡಿಗೆದಾರನಾದ ಅರ್ಜಿದಾರ ಹೆಸರಿನಲ್ಲಿ ಇದ್ದಲ್ಲಿ, ಅಂತಹ ದಸ್ತಾವೇಜು ಹಾಗೂ ಬಾಡಿಗೆ ಕರಾರನ್ನು ಸೇರಿಸಿ ಸಲ್ಲಿಸಿದರೆ ಸಿಂಧುವಾದ ಪುರಾವೆ ದಸ್ತಾವೇಜುಗಳನ್ನಾಗಿ ಪರಿಗಣಿಸಬೇಕು ಮತ್ತು ಮಾಲೀಕರ ಬಗ್ಗೆ ಯಾವುದೇ ಹೆಚ್ಚುವರಿ ದಸ್ತಾವೇಜುಗಳನ್ನು ಕೇಳತಕ್ಕದ್ದಲ್ಲ ಎಂದು ಈ ಮೂಲಕ ಮತ್ತೂ ಸಲಹೆ ನೀಡಲಾಗಿದೆ.

(iii) **ಮೇಲ್ಕಂಡ (i) ಮತ್ತು (ii) ಕ್ಕೆ ಒಳಪಡದ ಸ್ಥಳಗಳ ಕುರಿತು**, ಅಂದರೆ, ಸ್ಥಳದ ಮಾಲೀಕತ್ವ ಪತಿ ಅಥವಾ ಪತ್ನಿ, ಸಂಬಂಧಿಕರು ಮುಂತಾದವರ ಹೆಸರಿನಲ್ಲಿ ಇದ್ದಲ್ಲಿ, ಆ ಆಸ್ತಿಯ

ಮಾಲೀಕನಿಂದ ಸರಳ ಕಾಗದದಲ್ಲಿ ಸಮ್ಮತಿ ಪತ್ರ ಹಾಗೂ ಆ ಸಮ್ಮತಿ ನೀಡುವ ವ್ಯಕ್ತಿಯ ಗುರುತಿನ ಪುರಾವೆಯ ಪ್ರತಿಯೊಂದಿಗೆ, **ನಮೂನೆ GST REG-01 ಗೆ** ಅನುಬಂಧಿಸಿರುವ ಪಟ್ಟಿಯಲ್ಲಿನ **ದಸ್ತಾವೇಜುಗಳಲ್ಲಿ ಯಾವುದಾದರೂ ಒಂದನ್ನು**, ಸಮ್ಮತಿದಾರನ ಮಾಲೀಕತ್ವದ ಪುರಾವೆಯಾಗಿ ಸಲ್ಲಿಸಿದರೆ ಸಾಕು. ಈ ಪಟ್ಟಿಯು ಇತ್ತೀಚಿನ ಆಸ್ತಿ ತೆರಿಗೆ ರಸೀದಿ ಅಥವಾ ನಗರ ಪಾಲಿಕೆಯ ಖಾತಾ ಪ್ರತಿ ಅಥವಾ ವಿದ್ಯುತ್ ಬಿಲ್ಲಿನ ಪ್ರತಿ ಇವುಗಳನ್ನು ಒಳಗೊಂಡಿರುತ್ತದೆ. ಇವುಗಳಲ್ಲಿ ಯಾವುದಾದರೂ ಒಂದು ದಸ್ತಾವೇಜು ಅಥವಾ ಅದೇ ರೀತಿಯ ದಸ್ತಾವೇಜು ಅಂದರೆ, ಸಮ್ಮತಿದಾರನ ಆಸ್ತಿಯ ಮಾಲೀಕತ್ವವನ್ನು ಸ್ಪಷ್ಟವಾಗಿ ಸ್ಥಾಪಿಸುವಂತಹ ನೀರಿನ ಬಿಲ್ ಅಥವಾ ರಾಜ್ಯದ ಅಥವಾ ಸ್ಥಳೀಯ ಕಾನೂನುಗಳ ಅಡಿಯಲ್ಲಿ ನಿಗದಿತವಾದ ಇತರೆ ಯಾವುದೇ ದಸ್ತಾವೇಜುಗಳಲ್ಲಿ ಯಾವುದಾದರು ಒಂದು ಸಾಕಾಗುತ್ತದೆ ಮತ್ತು ಅರ್ಜಿದಾರನಿಂದ ಯಾವುದೇ ಹೆಚ್ಚುವರಿ ದಸ್ತಾವೇಜುಗಳನ್ನು ಕೇಳತಕ್ಕದ್ದಲ್ಲ

(ivಎ) **ಪಾಲು ಮಾಡಿರುವ ಸ್ಥಳಗಳಿಗೆ** ಸಂಬಂಧಿಸಿದಂತೆ, ಬಾಡಿಗೆ/ಭೋಗ್ಯದ ಕರಾರು ಲಭ್ಯವಿರುವಲ್ಲಿ, ಅರ್ಜಿದಾರನು ಆ ಕರಾರಿನ ಪ್ರತಿಯೊಂದನ್ನು ಜೊತೆಗೆ, ಇತ್ತೀಚಿನ ಪ್ರಾಪರ್ಟಿ ಟ್ಯಾಕ್ಸ್ ರಸೀದು, ನಗರಪಾಲಿಕೆಯ ಖಾತಾ ಪ್ರತಿ ಅಥವಾ ವಿದ್ಯುತ್ ಬಿಲ್ ಪ್ರತಿಯನ್ನು ಒಳಗೊಂಡಂತೆ, ಸ್ಥಳದ ಮಾಲೀಕತ್ವದ ಪುರಾವೆಗಾಗಿ ಸೂಚಿಸಲಾದ ಪಟ್ಟಿಯಲ್ಲಿರುವ ಯಾವುದೇ ಒಂದು ದಸ್ತಾವೇಜನ್ನು ಅಪ್ಲೋಡ್ ಮಾಡಬಹುದು. ನೋಂದಾಯಿಸದ ಬಾಡಿಗೆ/ಭೋಗ್ಯ ಕರಾರುಗಳ ಪ್ರಕರಣದಲ್ಲಿ, ಕರಾರಿನ ಪ್ರತಿಯ ಜೊತೆಗೆ ಮೇಲ್ಕಂಡ ಪಟ್ಟಿಯಲ್ಲಿರುವ ಯಾವುದೇ ಒಂದು ದಸ್ತಾವೇಜು ಮತ್ತು ಕರಾರುದಾತನ ಗುರುತಿನ ಪುರಾವೆಯ ಪ್ರತಿಯನ್ನು ಸಲ್ಲಿಸಿದರೆ ಸಾಕಾಗುತ್ತದೆ. ನೋಂದಾಯಿತವಾಗಿರುವ ಬಾಡಿಗೆ/ಭೋಗ್ಯ ಕರಾರುಗಳ ಪ್ರಕರಣದಲ್ಲಿ, ಕರಾರು ಪ್ರತಿಯ ಜೊತೆಗೆ ಮೇಲ್ಕಂಡ ಪಟ್ಟಿಯಲ್ಲಿರುವ ಯಾವುದೇ ಒಂದು ದಸ್ತಾವೇಜನ್ನಷ್ಟೆ ಸಲ್ಲಿಸಿದರೆ ಸಾಕು; ಮಾಲೀಕರ ಗುರುತಿನ ಪುರಾವೆಯನ್ನು ಕೇಳತಕ್ಕದ್ದಲ್ಲ.

(ivಬಿ) ಬಾಡಿಗೆ/ ಭೋಗ್ಯದ ಕರಾರು ಲಭ್ಯವಿಲ್ಲದ ಸಂದರ್ಭದಲ್ಲಿ, ಅರ್ಜಿದಾರನು ಸಮ್ಮತಿ ನೀಡುವ ವ್ಯಕ್ತಿಯ ಗುರುತಿನ ಪುರಾವೆಯ ಪ್ರತಿಯೊಂದಿಗೆ, ಸಮ್ಮತಿದಾರನಿಂದ ಸರಳ ಕಾಗದದಲ್ಲಿ ಪಡೆದ ಸಮ್ಮತಿ ಪತ್ರ ಹಾಗೂ ನಮೂನೆ GST REG-01 ಗೆ ಅನುಬಂಧಿಸಿರುವ ಪಟ್ಟಿಯಲ್ಲಿನ ದಸ್ತಾವೇಜುಗಳಲ್ಲಿ ಯಾವುದಾದರೂ ಒಂದನ್ನು, ಸಮ್ಮತಿದಾರನ ಮಾಲೀಕತ್ವದ ಪುರಾವೆಯಾಗಿ ಅಪ್ಲೋಡ್ ಮಾಡಬಹುದು. ಅಂತಹ ಪ್ರಕರಣಗಳಲ್ಲಿ, ಸದರಿ ಪಟ್ಟಿಯಲ್ಲಿರುವ **ಯಾವುದಾದರೂ ಒಂದು ದಸ್ತಾವೇಜು** ಅಥವಾ ರಾಜ್ಯದ ಅಥವಾ ಸ್ಥಳೀಯ ಕಾನೂನುಗಳ ಅಡಿಯಲ್ಲಿ ನಿಗದಿತವಾದ ಸಮ್ಮತಿದಾರನ ಆಸ್ತಿಯ ಮಾಲೀಕತ್ವವನ್ನು ಸ್ಪಷ್ಟವಾಗಿ ಸ್ಥಾಪಿಸುವಂತಹ ಅದೇ ರೀತಿಯ ದಸ್ತಾವೇಜುಗಳಲ್ಲಿ ಯಾವುದಾದರು ಒಂದು ಸಾಕಾಗುತ್ತದೆ ಮತ್ತು ಸಮ್ಮತಿದಾರನ ಸ್ಥಳದ ಮಾಲೀಕತ್ವದ ಪುರಾವೆಗಾಗಿ ಅರ್ಜಿದಾರನಿಂದ ಯಾವುದೇ ಹೆಚ್ಚುವರಿ ದಸ್ತಾವೇಜುಗಳನ್ನು ಕೇಳತಕ್ಕದ್ದಲ್ಲ.

(v) **ಬಾಡಿಗೆ/ಭೋಗ್ಯದ ಸ್ಥಳಗಳ ಪ್ರಕರಣಗಳಲ್ಲಿ, ಬಾಡಿಗೆ/ಭೋಗ್ಯದ ಕರಾರು ಲಭ್ಯವಿಲ್ಲದಿರುವಲ್ಲಿ**, ಅರ್ಜಿದಾರನು ಆ ಸ್ಥಳದ ಸ್ವಾಧೀನತೆಗೆ ಪೂರಕವಾಗಿ **ನಮೂನೆ GST REG-01ನಲ್ಲಿ** ಸೂಚಿಸಲಾದ ದಸ್ತಾವೇಜುಗಳಲ್ಲಿ ಯಾವುದಾದರೂ ಒಂದು ಅಂದರೆ, ಅರ್ಜಿದಾರನ ಹೆಸರಿನಲ್ಲಿ ಇರುವ ವಿದ್ಯುತ್ ಬಿಲ್ ಮುಂತಾದ ದಸ್ತಾವೇಜುಗಳ ಜೊತೆಯಲ್ಲಿನ ಒಂದು ಅಫಿಡವಿಟ್ ಸಾಕಾಗತಕ್ಕದ್ದು. ಅಂತಹ ಪ್ರಕರಣಗಳಲ್ಲಿ ಸದರಿ ಅಫಿಡವಿಟ್ಟನ್ನು ಕನಿಷ್ಠ ಮೌಲ್ಯದ ನ್ಯಾಯಿಕ ವಲ್ಲದ (non-judicial) ಸ್ಟ್ಯಾಂಪ್ ಪೇಪರ್‌ನಲ್ಲಿ ಪ್ರಥಮ ದರ್ಜೆ ನ್ಯಾಯಾಂಗ ಅಥವಾ ಕಾರ್ಯನಿರ್ವಹಣಾ ಮ್ಯಾಜಿಸ್ಟ್ರೇಟ್ ಅಥವಾ ನೋಟರಿ ಪಬ್ಲಿಕ್ ಅವರ ಸಮ್ಮುಖದಲ್ಲಿ ಬರೆದು ಕೊಡಬೇಕು ಎನ್ನುವುದನ್ನು ಗಮನದಲ್ಲಿಡಬಹುದು.

(vi) ಪ್ರಧಾನ ವ್ಯವಹಾರ ಸ್ಥಳವು ವಿಶೇಷ ಆರ್ಥಿಕ ವಲಯದಲ್ಲಿ (SEZ) ಇದ್ದರೆ ಅಥವಾ ಅರ್ಜಿದಾರನು ವಿಶೇಷ ಆರ್ಥಿಕ ವಲಯ ಅಭಿವೃದ್ಧಿದಾರನಾಗಿದ್ದರೆ, ಭಾರತ ಸರ್ಕಾರದಿಂದ

ನೀಡಲಾದ ಅಗತ್ಯ ದಸ್ತಾವೇಜುಗಳು/ಪ್ರಮಾಣಪತ್ರಗಳನ್ನು ಅಪ್ಲೋಡ್ ಮಾಡುವುದು ಅಗತ್ಯವಾಗಿರುತ್ತದೆ.

**B. ವ್ಯವಹಾರದ ಸಂಯೋಜನೆಗೆ ಸಂಬಂಧಿಸಿದ ವಿಷಯಗಳು:**

(i) ವ್ಯವಹಾರದ ಸಂಯೋಜನೆಗೆ ಸಂಬಂಧಿಸಿದಂತೆ, ಅರ್ಜಿದಾರನು ಪಾಲುದಾರರಲ್ಲಿ ಒಬ್ಬನಾಗಿದ್ದಲ್ಲಿ, ವ್ಯವಹಾರದ ಸಂಯೋಜನೆಯ ಪುರಾವೆಯಾಗಿ ಪಾಲುದಾರಿಕೆ ಡೀಡ್(Partnership Deed) ಅನ್ನು ಅಪ್ಲೋಡ್ ಮಾಡುವುದು ಅಗತ್ಯವಿರುತ್ತದೆ. **ಹೆಚ್ಚುವರಿ** ದಸ್ತಾವೇಜುಗಳಾದ ಉದ್ಯಮ ಪ್ರಮಾಣಪತ್ರ, MSME ಪ್ರಮಾಣಪತ್ರ, ಮಳಿಗೆ ಸ್ಥಾಪನಾ (shop establishment) ಪ್ರಮಾಣಪತ್ರ, ವ್ಯಾಪಾರ ಪರವಾನಗಿ ಮುಂತಾದವುಗಳನ್ನು ಕೇಳತಕ್ಕದ್ದಲ್ಲ.

(ii) ಅರ್ಜಿದಾರನು ಸಂಘ, ಟ್ರಸ್ಟ್, ಕ್ಲಬ್, ಸರ್ಕಾರಿ ಇಲಾಖೆ, ವ್ಯಕ್ತಿಗಳ ಕೂಟ ಅಥವಾ ವ್ಯಕ್ತಿಗಳ ನಿಕಾಯ, ಸ್ಥಳೀಯ ಪ್ರಾಧಿಕಾರ, ಶಾಸನಬದ್ಧ ನಿಕಾಯ ಮತ್ತು ಇತರೆ ಮುಂತಾದವುಗಳ ಪ್ರಕರಣದಲ್ಲಿ, ನೋಂದಣಿ ಪ್ರಮಾಣಪತ್ರ / ಸಂಯೋಜನೆಯ ಪುರಾವೆಯನ್ನು ಅರ್ಜಿದಾರನು ಅಪ್ ಲೋಡ್ ಮಾಡುವುದು ಅಗತ್ಯವಾಗಿರುತ್ತದೆ.

**7.** ನೋಂದಣಿ ಅರ್ಜಿ ಪರಿಷ್ಕರಣೆ ಮಾಡುವ ಸಂದರ್ಭದಲ್ಲಿ, ಹಲವಾರು ಅನವಶ್ಯಕ ದಸ್ತಾವೇಜುಗಳನ್ನು ಪ್ರಕಲ್ಪಿತ ಆಕ್ಷೇಪಣೆಗಳ ಮೂಲಕ ಕೇಳುತ್ತಿರುವುದನ್ನು ಗಮನಿಸಲಾಗಿದೆ. ಈ ರೀತಿ ಸಾಮಾನ್ಯವಾಗಿ ಕೇಳಲಾಗುವ ಆಕ್ಷೇಪಣೆಗಳೆಂದರೆ ಅರ್ಜಿದಾರ/ವ್ಯವಸ್ಥಾಪಕ ನಿರ್ದೇಶಕ/ಅಧಿಕೃತ ಸಹಿದಾರರ ನಿವಾಸದ ವಿಳಾಸವು ನೋಂದಣಿಗೆ ಅರ್ಜಿ ಸಲ್ಲಿಸಿರುವ ನಗರ ಅಥವಾ ರಾಜ್ಯದಲ್ಲಿಲ್ಲ; ಅರ್ಜಿದಾರನು ವ್ಯವಹಾರವನ್ನು ನಡೆಸಲು ಇಚ್ಛಿಸುವ ರಾಜ್ಯದಲ್ಲಿ, ನೋಂದಣಿ ಅರ್ಜಿಯಲ್ಲಿ ಅರ್ಜಿದಾರನಿಂದ ಉಲ್ಲೇಖಿಸಿರುವ ಸರಕುಗಳ HSN ಕೋಡ್ ವ್ಯಾಪಾರ ಮಾಡಲು ನಿಷೇಧಿಸಲಾಗಿದೆ ಅಥವಾ ಅನುಮತಿಸಲಾಗಿಲ್ಲ;ನೋಂದಣಿ ಅರ್ಜಿಯಲ್ಲಿ ನಮೂದಿಸಿರುವ ಚಟುವಟಿಕೆಗಳನ್ನು ಆ ನಿರ್ದಿಷ್ಟ ಸ್ಥಳದಲ್ಲಿ ನಿರ್ವಹಿಸಲು ಸಾಧ್ಯವಿಲ್ಲ ಇತ್ಯಾದಿ;ನೋಂದಣಿ ಅರ್ಜಿಗಳನ್ನು ನಿರ್ವಹಿಸುವ ಅಧಿಕಾರಿಗಳು, ಅರ್ಜಿದಾರನಿಂದ ಸಲ್ಲಿಕೆಯಾಗಿರುವ ದಸ್ತಾವೇಜುಗಳಿಗೆ ಅಥವಾ ಮಾಹಿತಿಗೆ ಸಂಬಂಧವಿಲ್ಲದ ಯಾವುದೇ ಊಹಾಪೋಹದ ಪ್ರಶ್ನೆಗಳನ್ನು ಕೇಳತಕ್ಕದ್ದಲ್ಲ.

8. **ನೋಂದಣಿ ಅರ್ಜಿಯ ಪ್ರಕ್ರಿಯೆ:**

(i) ಮೇಲ್ಕಂಡಂತೆ, ಛಾಯಾಚಿತ್ರ, ವ್ಯವಹಾರದ ಸಂಯೋಜನೆ, ಪ್ರಧಾನ ವ್ಯವಹಾರ ಸ್ಥಳ ಮುಂತಾದವುಗಳಿಗೆ ಸಂಬಂಧಿಸಿದಂತೆ ಅರ್ಜಿದಾರನಿಂದ ಅಪ್ಲೋಡ್ ಮಾಡಬೇಕಾದ ದಸ್ತಾವೇಜುಗಳ ಪಟ್ಟಿಯನ್ನು **ನಮೂನೆ GST REG-01** ನಿಯಮಿಸುತ್ತದೆ. ಯುಕ್ತ ಅಧಿಕಾರಿಯು ಆ ದಸ್ತಾವೇಜುಗಳು ಸ್ಪಷ್ಟವಾಗಿರುವುದು, ಪರಿಪೂರ್ಣವಾಗಿರುವುದು ಮತ್ತು ಸುಸಂಬದ್ಧವಾಗಿರುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಸದರಿ ದಸ್ತಾವೇಜುಗಳನ್ನು ಎಚ್ಚರಿಕೆಯಿಂದ ಪರಿಶೀಲಿಸತಕ್ಕದ್ದು. ಜೊತೆಗೆ ಯುಕ್ತ ಅಧಿಕಾರಿಯು ಅರ್ಜಿದಾರನು ಅರ್ಜಿಯಲ್ಲಿ ಸಲ್ಲಿಸಿರುವ ವಿವರಗಳು ಅಥವಾ ಮಾಹಿತಿಯನ್ನು ಸಹ, ಅದರ ಪರಿಪೂರ್ಣತೆಯನ್ನು ಪರೀಕ್ಷಿಸುವುದಕ್ಕಾಗಿ, ಅದನ್ನು ಅಪ್ಲೋಡ್ ಮಾಡಲಾದ ದಸ್ತಾವೇಜುಗಳೊಂದಿಗೆ ತಾಳೆ ನೋಡುವುದು ಮತ್ತು ಅಡ್ಡಪರಿಶೀಲನೆಗಾಗಿ ಹಾಗೂ ಅರ್ಜಿದಾರನ ವಿಶ್ವಾಸಾರ್ಹತೆಯನ್ನು ತಿಳಿಯುವುದಕ್ಕಾಗಿ ಎಚ್ಚರಿಕೆಯಿಂದ ಪರೀಕ್ಷಿಸತಕ್ಕದ್ದು. ಪ್ರಧಾನ ಮತ್ತು ಹೆಚ್ಚುವರಿ ವ್ಯವಹಾರ ಸ್ಥಳಗಳ ವಿಳಾಸದ ವಿವರಗಳು ಮತ್ತು ಅದಕ್ಕೆ ಸಂಬಂಧಿಸಿದಂತೆ ವಿಳಾಸದ ಪುರಾವೆಗಾಗಿ ಅಪ್ಲೋಡ್ ಮಾಡಲಾದ ದಸ್ತಾವೇಜುಗಳನ್ನು, ಅಂಥ ವ್ಯವಹಾರ ಸ್ಥಳದ ವಿಳಾಸದ ಪರಿಪೂರ್ಣತೆ ಮತ್ತು ನಿಖರತೆಯನ್ನು ತಿಳಿಯುವುದಕ್ಕಾಗಿ ತುಂಬ ಸೂಕ್ಷ್ಮವಾಗಿ ಪರಿಶೀಲಿಸತಕ್ಕದ್ದು. ಜೊತೆಗೆ ಸಾಧ್ಯವಾದಷ್ಟು ಮಟ್ಟಕ್ಕೆ ವಿಳಾಸದ ಪುರಾವೆಯಾಗಿ ಸಲ್ಲಿಸಲಾದ ದಸ್ತಾವೇಜುಗಳ ನಿಖರತೆಯನ್ನು, ಸಾರ್ವಜನಿಕವಾಗಿ ಲಭ್ಯವಿರುವ ಮೂಲಗಳಿಂದ, ಅಂದರೆ ಭೂ ನೋಂದಣಿ, ವಿದ್ಯುತ್ ಸರಬರಾಜು ಕಂಪನಿಗಳು, ನಗರಪಾಲಿಕೆಗಳು ಮತ್ತು ಸ್ಥಳೀಯ ಸಂಸ್ಥೆಗಳು ಮುಂತಾದ ಪ್ರಾಧಿಕಾರಗಳಿಗೆ ಸಂಬಂಧಿಸಿದ ವೆಬ್‌ಸೈಟ್‌ಗಳೊಡನೆ ಅಡ್ಡ ಪರಿಶೀಲನೆ ಮಾಡಬಹುದು.

(ii) ಸಾಮಾನ್ಯ ಪೋರ್ಟಲ್‌ನಲ್ಲಿ ದತ್ತಾಂಶ ವಿಶ್ಲೇಷಣೆ ಮತ್ತು ಅಪಾಯದ ಮಾನದಂಡಗಳ ಆಧಾರದ ಮೇಲೆ ಅಪಾಯಕರ (risky) ಎಂದು ಫ್ಲಾಗ್ (flag) ಮಾಡಿರದಿದ್ದಲ್ಲಿ, ಅರ್ಜಿ ಸಂಪೂರ್ಣವಾಗಿದ್ದು ಯಾವುದೇ ದೋಷವಿಲ್ಲದಿರುವುದು ಕಂಡುಬಂದಲ್ಲಿ, ಅಧಿಕಾರಿಗಳು ಅರ್ಜಿ ಸಲ್ಲಿಸಿದ ದಿನದಿಂದ 7 ಕಾರ್ಯನಿರತ ದಿನಗಳೊಳಗಾಗಿ ಅರ್ಜಿಯನ್ನು ಅನುಮೋದಿಸತಕ್ಕದ್ದು.

(iii) ಈ ಕೆಳಕಂಡ ಷರತ್ತುಗಳಿಗೆ ಅರ್ಜಿಗಳು ಒಳಪಟ್ಟಿದ್ದಲ್ಲಿ, **ವ್ಯವಹಾರ ಸ್ಥಳದ ಭೌತಿಕ ಪರಿಶೀಲನೆಯ ನಂತರ ಅರ್ಜಿ ಸಲ್ಲಿಸಿದ ದಿನದಿಂದ 30 ದಿನಗಳ ಒಳಗಾಗಿ ನೋಂದಣಿ ನೀಡತಕ್ಕದ್ದು:**

(ಎ) ಅರ್ಜಿದಾರನು ಆಧಾರ್ ಸಂಖ್ಯೆ ದೃಢೀಕರಣಕ್ಕೆ ಒಳಪಟ್ಟಿರುತ್ತಾನೆ ಮತ್ತು ದತ್ತಾಂಶ ವಿಶ್ಲೇಷಣೆ ಹಾಗೂ ಅಪಾಯದ ಮಾನದಂಡಗಳ ಆಧಾರದ ಮೇಲೆ ಸಾಮಾನ್ಯ ಪೋರ್ಟಲ್‌ನಲ್ಲಿ ಅಪಾಯಕರ (risky) ಎಂದು ಗುರುತಿಸಲ್ಪಟ್ಟಿರುತ್ತಾನೆ, ಅಥವಾ

(ಬಿ) ಅರ್ಜಿದಾರನು ಆಧಾರ್ ದೃಢೀಕರಣಕ್ಕೆ ಒಳಗಾಗಲು ವಿಫಲನಾಗಿರುತ್ತಾನೆ, ಅಥವಾ ಆಧಾರ್ ದೃಢೀಕರಣದ ಆಯ್ಕೆಯನ್ನು ಮಾಡಿರುವುದಿಲ್ಲ, ಅಥವಾ

(ಸಿ) ಆಯುಕ್ತರಿಂದ ಪ್ರಾಧಿಕೃತಗೊಂಡ ಅಧಿಕಾರಿಯ ಅನುಮೋದನೆಯೊಂದಿಗೆ, ವ್ಯವಹಾರ ಸ್ಥಳದ ಭೌತಿಕ ಪರಿಶೀಲನೆ ನಡೆಸುವುದು ಸೂಕ್ತವೆಂದು ಅಧಿಕಾರಿಯು ಪರಿಭಾವಿಸಿರುತ್ತಾರೆ.

(iv) ಮೇಲ್ಕಂಡ ಪ್ರಕರಣಗಳಲ್ಲಿ, ಭೌತಿಕ ಪರಿಶೀಲನೆ ನಡೆಸಬೇಕಾಗಿರುವ ಸಂದರ್ಭಗಳಲ್ಲಿ, ಯುಕ್ತ ಅಧಿಕಾರಿಯು ಕೆಜಿಎಸ್ಟಿ ನಿಯಮಗಳ, ನಿಯಮ 25ನ್ನು ಓದಿಕೊಂಡಂತೆ ನಿಯಮ 9ರ ಉಪಬಂಧಗಳ ಅನುಸಾರ ವ್ಯವಹಾರದ ಸ್ಥಳದ ಭೌತಿಕ ಪರಿಶೀಲನೆ ಪ್ರಕ್ರಿಯೆಯನ್ನು ಕೂಡಲೇ ಪ್ರಾರಂಭಿಸಬೇಕು. ಈ ಸಂಬಂಧ, ಸಂಬಂಧಿತ ಅಧಿಕಾರಿಯು ಭೌತಿಕ ಪರಿಶೀಲನಾ ವರದಿಯನ್ನು, ಛಾಯಾಚಿತ್ರಗಳನ್ನು ಒಳಗೊಂಡಂತೆ, ಇತರ ದಸ್ತಾವೇಜುಗಳೊಂದಿಗೆ **ನಮೂನೆ GST REG-30** ನಲ್ಲಿ ಅರ್ಜಿಯನ್ನು ಸಲ್ಲಿಸಿದ ದಿನದಿಂದ 30 ದಿನಗಳ ಕಾಲಾವಧಿ ಕೊನೆಗೊಳ್ಳುವಕ್ಕಿಂತ ಕನಿಷ್ಠ 05 ದಿನಗಳಿಗಿಂತ ಮುಂಚಿತವಾಗಿ ಸಿಸ್ಟಮ್ನಲ್ಲಿ ಅಪ್‌ಲೋಡ್ ಮಾಡುವಂತೆ ಖಚಿತಪಡಿಸಿಕೊಳ್ಳತಕ್ಕದ್ದು. ಭೌತಿಕ ಪರಿಶೀಲನೆ ನಡೆಸುವ ಅಧಿಕಾರಿ ಈ ಕೆಳಗಿನ ವಿಷಯಗಳನ್ನು ಖಚಿತಪಡಿಸಿಕೊಳ್ಳತಕ್ಕದ್ದು:

(ಎ) ಅರ್ಜಿದಾರನಿಂದ ಘೋಷಿತವಾಗಿರುವ ಪ್ರಧಾನ ವ್ಯವಹಾರದ ಸ್ಥಳ ಅಸ್ತಿತ್ವದಲ್ಲಿದೆಯೆ ಅಥವಾ ಇಲ್ಲವೇ ಎಂಬುದರ ಕುರಿತು ನಿರ್ದಿಷ್ಟ ವರದಿಯನ್ನು ನೀಡುವುದು.

(ಬಿ) ಉದ್ದಿಮೆ ಅಸ್ತಿತ್ವದಲ್ಲಿಲ್ಲ ಎಂದು ಕಂಡುಬಂದಲ್ಲಿ, ಸದರಿ ಸ್ಥಳವನ್ನು ಪತ್ತೆ ಹಚ್ಚಲು ಮಾಡಿದ ಪ್ರಯತ್ನಗಳ ವಿವರವನ್ನು ಭೌತಿಕ ಪರಿಶೀಲನಾ ವರದಿಯಲ್ಲಿ ದಾಖಲಿಸಬೇಕು.

(ಸಿ) ಭೌತಿಕ ಪರಿಶೀಲನಾ ಭೇಟಿಯ ವೇಳೆ, GPS ಸೌಲಭ್ಯ ಹೊಂದಿರುವ ಸ್ಥಳದ ಫೋಟೋ ಮತ್ತು ಇತರ ದಸ್ತಾವೇಜುಗಳನ್ನು ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬೇಕು.

(ಡಿ) ಭೌತಿಕ ಪರಿಶೀಲನೆಗಾಗಿ ನಿಯೋಜನೆಯಾದ ARN ಬೇರೆ ಕ್ಷೇತ್ರ ವ್ಯಾಪ್ತಿಗೆ ಒಳಪಟ್ಟಿದ್ದರೆ, ಅದನ್ನು ಕೂಡಲೇ ಸಂಬಂಧಿಸಿದ ಸರಿಯಾದ ಕ್ಷೇತ್ರ ವ್ಯಾಪ್ತಿಗೆ ಪೋರ್ಟಲ್ ಮೂಲಕ ಸಂಬಂಧಪಟ್ಟ ಅಧಿಕಾರಿಯು ಮರುನಿಯೋಜನೆ ಮಾಡಬೇಕು.

(v) ಈ ಕೆಳಕಂಡ ಪ್ರಕರಣಗಳಲ್ಲಿ, ಯುಕ್ತ ಅಧಿಕಾರಿ **ನಮೂನೆ GST REG-03** ನಲ್ಲಿ ಸ್ಪಷ್ಟನೆ ಅಥವಾ ಮಾಹಿತಿ ಅಥವಾ ದಸ್ತಾವೇಜುಗಳನ್ನು ಕೋರಬಹುದು:

ಎ. ಯಾವುದೇ ದಸ್ತಾವೇಜು ಅಪೂರ್ಣ ಅಥವಾ ಓದಲು ಸಾಧ್ಯವಾಗದ ಸ್ಥಿತಿಯಲ್ಲಿ ಇದ್ದಲ್ಲಿ, ಯುಕ್ತ ಅಧಿಕಾರಿಯು ಅದರ ಪೂರ್ಣ ಅಥವಾ ಓದಲು ಸಾಧ್ಯವಾಗುವ ಪ್ರತಿಯನ್ನು ಕೇಳಬಹುದು.

ಬಿ. ವ್ಯವಹಾರದ ಸ್ಥಳದ ವಿಳಾಸವು ಅರ್ಜಿದಾರನು ಅಪ್‌ಲೋಡ್ ಮಾಡಿದ ದಸ್ತಾವೇಜುಗಳೊಂದಿಗೆ ಹೊಂದಿಕೆಯಾಗದಿದ್ದಲ್ಲಿ, ಅಥವಾ ಅಂಥ ಅಪ್‌ಲೋಡ್ ಮಾಡಿದ ದಸ್ತಾವೇಜುಗಳು ಸದರಿ ವ್ಯವಹಾರ ಸ್ಥಳದ ವಿಳಾಸದ ಮಾನ್ಯವಾದ ಪುರಾವೆಯಾಗಿಲ್ಲದಿರುವುದು ಕಂಡುಬಂದಲ್ಲಿ, ಮೇಲೆ ಖಂಡಿಕೆ 6ರಲ್ಲಿ ತಿಳಿಸಿದ ಹೆಚ್ಚುವರಿ ದಸ್ತಾವೇಜುಗಳನ್ನು ಕೋರಬಹುದು.

ಸಿ. ವ್ಯವಹಾರ ಸ್ಥಳದ ವಿಳಾಸ ಅಪೂರ್ಣ ಅಥವಾ ಅಸ್ಪಷ್ಟವಾಗಿದ್ದಲ್ಲಿ, ಯುಕ್ತ ಅಧಿಕಾರಿಯು ವಿಳಾಸದ ಪೂರ್ಣ ಮತ್ತು ಸ್ಪಷ್ಟ ವಿಳಾಸದ ವಿವರಗಳನ್ನು ಮತ್ತು ಅದಕ್ಕೆ ಸಂಬಂಧಪಟ್ಟ ದಸ್ತಾವೇಜುಗಳನ್ನು ಕೋರಬಹುದು.

ಡಿ. ಅರ್ಜಿದಾರರ PAN ಗೆ ಲಿಂಕ್ ಆಗಿರುವ ಯಾವುದೇ GSTIN ರದ್ದುಗೊಂಡಿರುವುದು ಅಥವಾ ಅಮಾನತ್ತುಗೊಂಡಿರುವುದು ಕಂಡುಬಂದಲ್ಲಿ, ಅಗತ್ಯವಿದ್ದರೆ ಯುಕ್ತ ಅಧಿಕಾರಿಯು, ಅದಕ್ಕೆ ಸಂಬಂಧಿಸಿದಂತೆ ಸ್ಪಷ್ಟನೆ ಅಥವಾ ಕಾರಣಗಳನ್ನು ಅರ್ಜಿದಾರನಿಂದ ಕೇಳಬಹುದು.

(vi) ಮೇಲಿನ ಖಂಡಿಕೆ 8(ii) ರಲ್ಲಿ ಉಲ್ಲೇಖಿಸಿದಂತೆ ಅಪಾಯಕರ (risky) ಎಂದು ಗುರುತಿಸದಿಲ್ಲದಿರುವ ಪ್ರಕರಣಗಳಲ್ಲಿ ಅರ್ಜಿ ಸಲ್ಲಿಸಿದ ದಿನಾಂಕದಿಂದ 07 ಕಾರ್ಯನಿರತ ದಿನಗಳ ಒಳಗಾಗಿ ಅಥವಾ ಮೇಲಿನ ಖಂಡಿಕೆ 8(v) ರಲ್ಲಿ ಉಲ್ಲೇಖಿಸಿದಂತೆ ಅಪಾಯಕರ (risky) ಎಂದು ಗುರುತಿಸಿರುವ ಪ್ರಕರಣಗಳಲ್ಲಿ ಅರ್ಜಿ ಸಲ್ಲಿಸಿದ ದಿನಾಂಕದಿಂದ 30 ದಿನಗಳ ಒಳಗಾಗಿ ಯುಕ್ತ ಅಧಿಕಾರಿಯು ಮೇಲೆ ಹೇಳಲಾದ ಕಾರಣಾಧಾರಗಳ ಮೇಲೆ ಮಾತ್ರ **ನಮೂನೆ GST REG-03** ನಲ್ಲಿ ವಿದ್ಯುನ್ಮಾನದ ಮೂಲಕ ಅರ್ಜಿದಾರನಿಗೆ ಸೂಚನಾ ಪತ್ರವನ್ನು ನೀಡತಕ್ಕದ್ದು. ಆದಾಗ್ಯೂ, ನೋಂದಣಿಗಾಗಿ ಅರ್ಜಿಗಳನ್ನು ಪರಿಷ್ಕರಿಸುವಾಗ, **ಪಟ್ಟಿಮಾಡಲಾದ ದಸ್ತಾವೇಜುಗಳಿಂದ ಹೊರತಾದ ಯಾವುದೇ ದಸ್ತಾವೇಜುಗಳನ್ನು ಕೋರುವುದು ಅಗತ್ಯವಿರುವಾಗ, ಅಧಿಕಾರಿಯು ಸಂಬಂಧಿಸಿದ ಜಂಟಿ ಆಯುಕ್ತರ ಅನುಮೋದನೆಯನ್ನು ಪಡೆದ ನಂತರವೆ ಅಂಥ ದಸ್ತಾವೇಜುಗಳನ್ನು ಕೋರತಕ್ಕದ್ದು**. ತೆರಿಗೆ ಅಧಿಕಾರಿಗಳ ಕಡೆ ಸಕಾಲಿಕ ಕ್ರಮವನ್ನು ನಿರೀಕ್ಷಿಸುವ, ನೋಂದಣಿ ಮಂಜೂರಾತಿಗಾಗಿ ಸಲ್ಲಿಕೆಯಾಗಿರುವ ಯಾವುದೇ ಅರ್ಜಿಯು ಸ್ವಯಂ ಅನುಮೋದನೆಗೊಳ್ಳದಂತೆ ನೋಡಿಕೊಳ್ಳುವುದನ್ನು ಖಾತರಿಪಡಿಸಿಕೊಳ್ಳತಕ್ಕದ್ದು. ಮೇಲ್ಕಂಡ ದಸ್ತಾವೇಜುಗಳ ಹೊರತಾಗಿ ಯಾವುದೇ ಹೆಚ್ಚುವರಿ ದಸ್ತಾವೇಜುಗಳು ಅಥವಾ ಊಹೆಯ ಆಧಾರದ ಮೇಲೆ ಯಾವುದೇ ಮಾಹಿತಿ ಅಥವಾ ಸ್ಪಷ್ಟನೆಗಳನ್ನು ಕೇಳುವಂತಿಲ್ಲ ಎನ್ನುವುದನ್ನು ಸಹ ಅಧಿಕಾರಿಯು ಖಾತರಿಪಡಿಸಿಕೊಳ್ಳತಕ್ಕದ್ದು. ಜೊತೆಗೆ, ವ್ಯವಹಾರದ ಸ್ಥಳ ಅಥವಾ ವ್ಯವಹಾರದ ಸಂಯೋಜನೆ, ಇತ್ಯಾದಿಗಳ ಪುರಾವೆಯನ್ನು ಸ್ಥಾಪಿಸುವುದಕ್ಕಾಗಿ ಸಂಬಂಧಪಡದ ಅಲ್ಪ ದೋಷಗಳಿಗಾಗಿ ಪ್ರಶ್ನೆಗಳನ್ನು ಕೇಳಬಾರದು ಎಂಬುದನ್ನು ಕೂಡ ಅಧಿಕಾರಿಗಳು ಖಾತರಿಪಡಿಸಿಕೊಳ್ಳತಕ್ಕದ್ದು.

(vii) ಅರ್ಜಿದಾರ **ನಮೂನೆ GST REG-03** ರಲ್ಲಿ ನೀಡಲಾದ ಸೂಚನಾ ಪತ್ರ ಸ್ವೀಕರಿಸಿದ ದಿನಾಂಕದಿಂದ 07 ಕಾರ್ಯನಿರತ ದಿನಗಳ ಒಳಗಾಗಿ, **ನಮೂನೆ GST REG-04** ನಲ್ಲಿ ಉತ್ತರವನ್ನು ಸಲ್ಲಿಸುವುದು ಅಗತ್ಯವಿರುತ್ತದೆ. ಅರ್ಜಿದಾರ **ನಮೂನೆ GST REG-04** ನಲ್ಲಿ ನೀಡಿದ ಸ್ಪಷ್ಟನೆ, ಮಾಹಿತಿಗಳು ಅಥವಾ ದಸ್ತಾವೇಜುಗಳನ್ನು ಯುಕ್ತ ಅಧಿಕಾರಿ ಎಚ್ಚರಿಕೆಯಿಂದ ಪರೀಕ್ಷಿಸತಕ್ಕದ್ದು. ಅರ್ಜಿದಾರನು **ನಮೂನೆ GST REG-04** ರಲ್ಲಿ ನೀಡಿದ ಉತ್ತರವು ಯುಕ್ತ ಅಧಿಕಾರಿಗೆ ತೃಪ್ತಿಕರವಾಗಿದ್ದಲ್ಲಿ, ಅವನು ಅಂಥ ಉತ್ತರವನ್ನು ಸ್ವೀಕರಿಸಿದ ದಿನಾಂಕದಿಂದ 07 ಕಾರ್ಯನಿರತ ದಿನಗಳ ಒಳಗಾಗಿ ನೋಂದಣಿ ಅರ್ಜಿಯನ್ನು ಅನುಮೋದಿಸತಕ್ಕದ್ದು. ಆದಾಗ್ಯೂ, ಅರ್ಜಿದಾರನು ನೀಡಿದ ಸ್ಪಷ್ಟನೆ, ಮಾಹಿತಿ ಅಥವಾ ಸಲ್ಲಿಸಿದ ದಸ್ತಾವೇಜುಳು ಯುಕ್ತ ಅಧಿಕಾರಿಗೆ

ತೃಪ್ತಿಕರವಾಗಿಲ್ಲದಿದ್ದಲ್ಲಿ, ಉತ್ತರವನ್ನು ಸ್ವೀಕರಿಸಿದ ದಿನಾಂಕದಿಂದ 07 ಕಾರ್ಯನಿರತ ದಿನಗಳ ಒಳಗಾಗಿ ಲಿಖಿತವಾಗಿ ಕಾರಣಗಳನ್ನು ದಾಖಲಿಸುವ ಮೂಲಕ ಅಂಥ ಅರ್ಜಿಯನ್ನು ತಿರಸ್ಕರಿಸಬಹುದು ಹಾಗೂ **ನಮೂನೆ GST REG-05** ನಲ್ಲಿ ಅರ್ಜಿದಾರರಿಗೆ ವಿದ್ಯುನ್ಮಾನವಾಗಿ ತಿಳಿಸುವುದು.

(viii) **ನಮೂನೆ GST REG-03** ನಲ್ಲಿ ನೀಡಿದ ಸೂಚನಾ ಪತ್ರದ ದಿನಾಂಕದಿಂದ 07 ಕಾರ್ಯನಿರತ ದಿನಗಳ ಒಳಗಾಗಿ ಅರ್ಜಿದಾರರು ಸೂಚನಾ ಪತ್ರಕ್ಕೆ ಯಾವುದೇ ಉತ್ತರವನ್ನು ಸಲ್ಲಿಸದಿರುವ ಪ್ರಕರಣಗಳಲ್ಲಿ, ಯುಕ್ತ ಅಧಿಕಾರಿಯು ಉತ್ತರವನ್ನು ಸ್ವೀಕರಿಸಲು ಇರುವ ಗಡುವು ದಿನಾಂಕ ಮೀರಿದ ದಿನದಿಂದ 07 ಕಾರ್ಯನಿರತ ದಿನಗಳ ಒಳಗಾಗಿ ಲಿಖಿತವಾಗಿ ಕಾರಣಗಳನ್ನು ದಾಖಲಿಸುವ ಮೂಲಕ ಅಂಥ ಅರ್ಜಿಯನ್ನು ತಿರಸ್ಕರಿಸಬಹುದು ಹಾಗೂ **ನಮೂನೆ GST REG-05** ನಲ್ಲಿ ಅರ್ಜಿದಾರರಿಗೆ ವಿದ್ಯುನ್ಮಾನವಾಗಿ ತಿಳಿಸುವುದು.

9. ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು, ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ/ಅತ್ಯಧಿಕ ತೆರಿಗೆ ಪಾವತಿದಾರರ ಘಟಕ ರವರುಗಳು ಈ ಕೆಳಗಿನ ಕ್ರಮಗಳನ್ನು ಅನುಸರಿಸುವುದು:

i. ಭೌತಿಕ ಪರಿಶೀಲನೆಗಳು, ಕೇಳಲಾಗುತ್ತಿರುವ ಆಕ್ಷೇಪಣೆಗಳ ಸ್ವರೂಪ, ಸ್ವಯಂ ನೋಂದಣಿಗಳು (deemed registrations) ಮುಂತಾದವುಗಳನ್ನು ಒಳಗೊಂಡಂತೆ ನೋಂದಣಿ ಅರ್ಜಿಗಳ ಪರಿಶೀಲನಾ ಪ್ರಕ್ರಿಯೆಯ ಸ್ಥಿತಿಗತಿಯನ್ನು ವಿಭಾಗೀಯ ಮಟ್ಟದಲ್ಲಿ ನಿಯತಕಾಲೀನ ಪುನಾರಾವಲೋಕನದ ಮೂಲಕ ನಿಕಟವಾಗಿ ಮೇಲ್ವಿಚಾರಣೆ ಮಾಡಬೇಕು,

ii. ಈ ಸೂಚನೆಗಳನ್ನು ಪಾಲಿಸದಿರುವ ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬಹುದು;

iii. ನೋಂದಣಿ ಅರ್ಜಿಗಳ ಸಮಯೋಚಿತ ವಿಲೇವಾರಿಯನ್ನು ಖಾತರಿಪಡಿಸಲು ಅಗತ್ಯವಿರುವ ಸಿಬ್ಬಂದಿಯನ್ನು ನೋಂದಣಿ ಅರ್ಜಿಗಳ ನಿರ್ವಹಣೆಗಾಗಿ ನಿಯೋಜಿಸಬೇಕು;

10. ಈ ಸೂಚನೆಗಳ ಅನುಷ್ಠಾನದಲ್ಲಿ ಯಾವುದೇ ಅಡಚಣೆಗಳಿದ್ದಲ್ಲಿ ಈ ಕಚೇರಿಗೆ ತಿಳಿಸಬಹುದು

(ವಿಪುಲ್ ಬನ್ಸಾಲ್)
ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ), ಬೆಂಗಳೂರು
ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ) ಬೆಂಗಳೂರು

ಇವರಿಗೆ,
ರಾಜ್ಯದಲ್ಲಿರುವ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ